# ಅನೈತಿಕ ಕವಿತೆ

## ರೋಹಿಣಿ ಚಂದ್ರ

ಕಲೆ: ಮುರಳೀಧರ್ ರಾಥೋಡ್



ಕತ್ತಲ ಕೋಣೆಯೊಳಗೆ
ಹುತ್ತದ ಹಾವುಗಳಂತೆ
ಕಾಯಗಳೆರಡ ಹೊರಳಾಟ
ಪ್ರೀತಿ ಇತ್ತೇ ಅಲ್ಲಿ?
ಸುಳ್ಳೇ ನೀ ಅದ್ಭುತ

ಮನಸಿಗೆ ಮೋಹವೆಂಬ
ಸಾವಿರ ಬಲೆ
ದೇಹಕ್ಕೆ ದಾಹವೆಂಬ
ಕುಂಭದ್ರೋಣ ಮಳೆ
ಪ್ರೀತಿಯೆಂಬುದು ಅಲ್ಲಿ
ಮರೆತ ಮರಣ

ಋಣವಿತ್ತೇ ಅಲ್ಲಿ?
ಬೆಳೆವ ಕರ್ಮದ ನೆರಳಿತ್ತೇ ಅಲ್ಲಿ?
ಯಾವುದೂ ಇಲ್ಲ
ಕಣ್ಣಂಚಿನ ಬೇಟವಿತ್ತಲ್ಲಿ
ಹೊಂಚುವ ಸೂಚವಿತ್ತಲ್ಲಿ

ಹಗುರಾದ ದೇಹಕ್ಕೀಗ
ದಾಕ್ಷಿಣ್ಯದ ಮನ ಭಾರ
ತಿಪ್ಪೆಹುಳು ನರ ನಾಡಿಯಲ್ಲಾ
ಬುದ್ಧಿಗೀಗ ಜಾಣ ಕುರುಡು

ಹೊಕ್ಕಳ ಆಳದಲ್ಲಿ
ದಕ್ಕಿದ ಸುಖಕ್ಕೀಗ
ಕ್ಷಣ ಮಾತ್ರದ ಮತಿಭ್ರಮಣೆ

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68